ಇತ್ತು ಅಂತ. ಅಂಬೇಡ್ಕರ್‌ವಾದಿಗಳು ಹಾಗೂ ಗಾಂಧಿವಾದಿಗಳು ಒಂದಾ ಅದು – ಇಲ್ಲವೇ ಇದು ಅನ್ನೋ ಆಯ್ಕೆಯನ್ನು ನಮ್ಮ ಮುಂದಿಡ್ತಾರೆ. ಅವರಿಬ್ಬರಲ್ಲಿ ಒಂದು ಬಗೆಯ ಅನುಸಂಧಾನ ನಡೆದಿದೆ ಅಂತ ಡಿ.ಆರ್. ಮೊದಲಿಗೆ ಕಾಣಿಸಿದರು. ಅಂಬೇಡ್ಕರ್ ಸಂಪರ್ಕಕ್ಕೆ ಬಂದ ಮೇಲೆ ಗಾಂಧಿ ಮೊದಲಿನ ಗಾಂಧಿಯಾಗಿ ಉಳೀಲಿಲ್ಲ. ಗಾಂಧಿಯವರ ಸಂಪರ್ಕ ಬಂದ ಮೇಲೆ ಅಂಬೇಡ್ಕರ್ ಮೊದಲಿನ ಅಂಬೇಡ್ಕರ್ ಆಗಿರಲಿಲ್ಲ. ಇಬ್ಬರೂ ತಂತಮ್ಮ ನಿಲುವುಗಳನ್ನು ಬಿಟ್ಟುಕೊಡದೆ ಮೃದುವಾಗಿದಾರೆ. ಡಿ.ಆರ್. ನಾಗರಾಜ್ ನನಗೆ ವೈಯಕ್ತಿಕವಾಗಿ ಕೂಡ ಪ್ರೀತಿಯವರು. ಅವರು ಸಾಹಿತ್ಯವನ್ನಂತೂ ತೀವ್ರವಾಗಿ ಹಚ್ಚಿಕೊಂಡಿದ್ದರು. ಅದು ನನಗೂ ಒಂದು ಆದರ್ಶ. ನಾನು ಗ್ರಹಿಸುವುದನ್ನು ಸಾಹಿತ್ಯದಲ್ಲೇ ಗ್ರಹಿಸ್ತೇನೆ ಅನ್ನೋ ತೀವ್ರತೆ ಅದು. ಈ ತೀವ್ರತೆ ಕಿ.ರಂ. ನಾಗರಾಜರಿಗೂ ಇತ್ತು.

◆ **ಭಾರತದಲ್ಲಿ ಬುದ್ಧಿಜೀವಿಗಳನ್ನು ದುರುಳೀಕರಣ ಮಾಡಲಾಗುತ್ತಿದೆ. ಕೊಲ್ಲಲಾಗುತ್ತಿದೆ. ಇದು ಮತೀಯ ಸಿದ್ಧಾಂತ ಆಕ್ರಮಣಕಾರಿ ಆಗಿರುವ ಫಲವೊ? ಧರ್ಮಗಳನ್ನು ವಿಮರ್ಶಿಸುವುದಕ್ಕೆ, ಸಮುದಾಯಗಳ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಚಿಂತಕರಲ್ಲೇ ಸಮಸ್ಯೆಯಿದೆಯೊ?**

ಚಿಂತಕರ ಅಪ್ರೋಚ್‌ನಲ್ಲೇ ಸಮಸ್ಯೆ ಇದೆ ಅಂತ ನನಗನಸೋದಿಲ್ಲ. ನಾವು ಸಾಮಾನ್ಯರ ಸಾವು, ಚಿಂತಕರ ಸಾವು ಅಂತ ಪರಿಗಣಿಸೋದು ಇದೆಯಲ್ಲ, ಪ್ರಿಯರೈಟೈಸಿಂಗ್ ಸರ್ಟನ್ ಡೆತ್ಸ್, ತಪ್ಪು. ಹಾಡಹಗಲೇ ಜನರನ್ನು ಲಿಂಚಿಂಗ್ ಮಾಡಿದರೂ ಏನೂ ಆಗದಿದ್ದ ಹಾಗೆ ನಮ್ಮ ನಾಗರಿಕರು ಜೀವನ ಮಾಡ್ತಾ ಹೋದರೆ, ಆ ಪ್ರಕರಣ ಅಲ್ಲಿಗೇ ನಿಲ್ಲೋದಿಲ್ಲ. ಅದು ಚಿಂತಕರನ್ನೂ ಬಲಿ ತೆಗೆದುಕೊಳ್ಳುತ್ತೆ. ಹಾಗಾಗಿ ಬುದ್ಧಿಜೀವಿಗಳ ಸಾವು ಅಂತ ವಿಶೇಷ ಮಾಡಬಾರದು. ಅದು ಎಲ್ಲಾ ಮನುಷ್ಯರ ಸಾವು. ದಾದ್ರಿಯಲ್ಲಿ ದನದ ಮಾಂಸ ತಿಂದರೂ ಅಂತ ಅಖಲಾಕನನ್ನು ಸಾಯಿಸುವ ಸಮಾಜದಲ್ಲಿ, ಗೌರಿ, ಕಲಬುರ್ಗಿಯಂಥವರೂ ಸಾಯಬೇಕಾಗುತ್ತೆ.

◆ **'ಬುದ್ಧಿಜೀವಿ', 'ವೈಚಾರಿಕ' ಎನ್ನುವ ನುಡಿಗಟ್ಟುಗಳನ್ನು, ಸಮಾಜಕ್ಕೆ ಕೇಡನ್ನುಂಟು ಮಾಡುವವರು ಎಂಬ ರೀತಿಯಲ್ಲಿ ಅರ್ಥ ಬರುವಂತೆ ವಾತಾವರಣ ನಿರ್ಮಾಣ ಮಾಡಲಾಗಿದೆ.**

ಜರ್ಮನಿಯ ನಾಜಿ ಲೇಖಕ ಹ್ಯಾನ್ಸ್ ಜಾಸ್ಟನ ನಾಟಕದಲ್ಲಿ ಒಂದು ಹೇಳಿಕೆಯಿದೆ: 'ವೆನ್ ಐ ಹಿಯರ್ ದ ವರ್ಡ್ ಕಲ್ಚರ್ ಅಂಡ್ ಐ ರೀಚ್ ಫಾರ್ ಮೈ ಗನ್' ಅಂತ. ಲೇಖಕರು ಕಲಾವಿದರು ಪೈಂಟರುಗಳು ಪ್ರಭುತ್ವಗಳಿಗೆ ವಿರುದ್ಧ ಇದ್ದರು. ಸ್ಪೇನ್‌ನಲ್ಲಿ ಫ್ರಾಂಕೋನ ಪ್ರಭುತ್ವದ ವಿರುದ್ಧ, ಇಟಲಿಯಲ್ಲಿ ಫ್ಯಾಸಿಸ್ಟರ ವಿರುದ್ಧ, ಜರ್ಮನಿಯಲ್ಲಿ ಹಿಟ್ಲರನ ವಿರುದ್ಧ ಇದ್ದರು. ಅವರ ಬಗ್ಗೆ ಒಂದು ಸಂದೇಹ ಅಲ್ಲಿಯ ಬಲಪಂಥೀಯರಿಗೆ ಇತ್ತು. ಮೊದಲಿಂದಲೂ ಸ್ವತಂತ್ರವಾಗಿ ಯೋಚಿಸುವವರನ್ನು ಕಂಡರೆ ಅವರಿಗೆ ಸಂದೇಹ. ಆಳುವವರು ಯೋಚನೆ ಮಾಡೋರನ್ನು ಯಾವತ್ತೂ ಇಷ್ಟಪಡೋದಿಲ್ಲ. ಆದ್ದರಿಂದ ಇದು ತೀರ ಇತ್ತೀಚಿನದಲ್ಲ ಮತ್ತು ಹೊಸತಲ್ಲ. ಇದು ಅಧಿಕಾರದಿಂದಲೇ ಹುಟ್ಟಿಕೊಂಡ ಅಸಹನೆ. ಸಮಾಜದಲ್ಲಿ ಸ್ವಯಂಪ್ರೇರಿತವಾದುದಲ್ಲ. ವ್ಯವಸ್ಥಿತವಾಗಿ ಹುಟ್ಟು ಹಾಕಿದ್ದು.

◆ **ಇಂತಹ ಸಂಕೀರ್ಣವಾದ ಜಟಿಲ ಸನ್ನಿವೇಶದಲ್ಲಿ ಚಿಂತನೆಗೆ ಮತ್ತು ಅಭಿವ್ಯಕ್ತಿಗೆ ಹೊಸ ನುಡಿಗಟ್ಟನ್ನು ಹುಡುಕಿಕೊಳ್ಳಬೇಕು ಅನಿಸುತ್ತಾ?**

ಅದೇನೇನೇ ಒಂದು ಮುರುಕುಗೊಂಡ ಊನಗೊಂಡ ಸಮಾಜದ ಸಂಕೇತ ಅಲ್ಲವಾ?